PHONE: 08228-297209

# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂತೆಸರಗೂರು
## ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆ

ಮಾನ್ಯ ಶ್ರೀ.ಬಿ.ಪಿ.ಭಾಸ್ಕರ್, ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂತೆಸರಗೂರು ಇವರ ಅಧ್ಯಕ್ಷತೆಯಲ್ಲಿ **ದಿನಾಂಕ:10-01-2020** ರಂದು ಶುಕ್ರವಾರ ಬೆಳಿಗ್ಗೆ **11.00** ಘಂಟೆಗೆ ನಡೆದ ಸಮಿತಿ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು: 12**

01 ಶ್ರೀ ಬಿ.ಪಿ.ಭಾಸ್ಕರ್ – ಅಧ್ಯಕ್ಷರು
02 ಶ್ರೀಮತಿ ಮೀನಾಕ್ಷಿ – ಉಪಾಧ್ಯಕ್ಷರು
03 ಶ್ರೀ ಸಿದ್ದರಾಜು – ಸದಸ್ಯರು
04 ಶ್ರೀ ಡಿ.ಪಿ.ಮಹೇಶ್ – ಸದಸ್ಯರು
05 ಶ್ರೀಮತಿ ರತ್ನಮ್ಮ – ಸದಸ್ಯರು
06 ಶ್ರೀ ಜಗದೀಶ್(ಅಯ್ಯು) – ಸದಸ್ಯರು
07 ಶ್ರೀ ಹೊ.ಕೆ.ಮಹೇಂದ್ರ – ಸದಸ್ಯರು
08 ಶ್ರೀ ಮಹದೇವಪ್ಪ – ಸದಸ್ಯರು
09 ಶ್ರೀ ರಾಮಣ್ಣ – ಸದಸ್ಯರು
10 ಶ್ರೀ ಎಂ. ಮಂಜುನಾಥ್ – ಸದಸ್ಯರು

**ಗೈರು ಹಾಜರಾದ ಸದಸ್ಯರು: – 01**

11 ಶ್ರೀ ಜವರನಾಯಕ – ಸದಸ್ಯರು
12 ಶ್ರೀಮತಿ ಸುಜಾತ – ಸದಸ್ಯರು
13 ಶ್ರೀ ಸಂತೋಷ್‌ಕುಮಾರ್ – ಸದಸ್ಯರು

| | |
|---|---|
| ವಿಷಯ:01 | ದಿನಾಂಕ:14/11/2019ರ ಸಾಮಾನ್ಯ ಸಭೆಯ ನಡವಳಿಯನ್ನು ಓದಿ ಒಪ್ಪುವ ವಿಚಾರ. |
| ತೀರ್ಮಾನ: | ದಿನಾಂಕ:14/11/2019ರ ಸಾಮಾನ್ಯ ಸಭೆಯ ನಡವಳಿಯನ್ನು ಓದಿ ಒಪ್ಪಲಾಯಿತು. |
| ವಿಷಯ:02 | 2019ನೇ ನವಂಬರ್ ಮಾಹೆಯ ಜಮಾ-ಖರ್ಚು ಪರಿಶೀಲಿಸುವ ವಿಚಾರ. |
| ತೀರ್ಮಾನ: | 2019ನೇ ನವಂಬರ್ ಮಾಹೆಯ ಜಮಾ-ಖರ್ಚು ಪರಿಶೀಲಿಸಲಾಯಿತು. |
| ವಿಷಯ:03 | 2019-20ನೇ ಸಾಲಿನ ನಿಯಮ 71ರಡಿಯಲ್ಲಿ 02 ಸಂಖ್ಯೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಮಾನ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಮೈಸೂರುರವರು ಕಳುಹಿಸಿಕೊಟ್ಟಿರುವ ಟೆಂಡರ್ ತುಲನಾತ್ಮಕ ತ:ಖ್ತೆಯನ್ನು ಪರಿಶೀಲಿಸಿ ಕಾರ್ಯಾದೇಶ ನೀಡುವ ವಿಚಾರ. |
| ತೀರ್ಮಾನ: | 1) ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2019-20ನೇ ಸಾಲಿನ ನಿಯಮ-71 ರಡಿಯಲ್ಲಿ ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಬೆಳೆದಿರುವ ಜಂಗಲ್ ಮತ್ತು ಚರಂಡಿ ಹೂಳು ತೆಗೆಯುವ ಕಾಮಗಾರಿಗೆ ಸಂಬಂದಿಸಿದಂತೆ ಮಾನ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಮೈಸೂರು ರವರು ತಮ್ಮ ಕಛೇರಿ ಪ.ಸಂಖ್ಯೆ: ಕೃಮಾಇ/ಸಕಾನಿಅ(ಮೈ)/ ಆ.ಬಿಡ್ ತು.ತ:ಖ್ತೆ ನಿಯಮ71 2019-20 (ಸಂ.ಸರಗೂರು) /722/2019-20 ದಿನಾಂಕ:21/12/2019 ರಲ್ಲಿ ಕಳುಹಿಸಿರುವ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿ ಟೆಂಡರ್‌ನಲ್ಲಿ ಭಾಗವಹಿಸಿದ ಇಬ್ಬರು ಗುತ್ತಿಗೆದಾರರ ಪೈಕಿ ಸುರೇಶ್, ಗುತ್ತಿಗೆ ದಾರರು, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ ತಾ: ರವರು ಸದರಿ ಅಭಿವೃದ್ಧಿ ಕಾಮಗಾರಿಗೆ **2016-17**ನೇ ಶೆಡ್ಯೂಲ್'ಬಿ' ದರಗಳ ನಮೂದಿಸಿರುವ ಶೇ.**4.38** ಹೆಚ್ಚಿನ ದರಗಳ ಮೊತ್ತ ರೂ.**1,03,151.23** ಒಂದನೇ ಕಡಿಮೆ ದರವಾಗಿರುವುದಾಗಿ ಹಾಗೂ ಇವರ ಟೆಂಡರ್‌ಗೆ ಟೆಂಡರ್ ಪಾರದರ್ಶಕತೆ ನಿಯಮಾನುಸಾರ ಹಾಗೂ ಮಾನ್ಯನಿರ್ದೇಶಕರ ಸುತ್ತೋಲೆ ಗಳಂತೆ ಸಮಿತಿ ಮಟ್ಟದಲ್ಲಿ ಅನುಮೋದನೆ ಪಡೆದುಕೊಳ್ಳಲು ಶಿಫಾರಸ್ಸು ಮಾಡಿರುವ್ರು ದನ್ನು ಪರಿಶೀಲಿಸಿ ಸದರಿ ಕಾಮಗಾರಿಯನ್ನು ಶ್ರೀ ಸುರೇಶ್, ಗುತ್ತಿಗೆದಾರರು, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ ತಾಲ್ಲೂಕು ರವರಿಗೆ ಕೆಲಸದ ಆದೇಶ ನೀಡಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.<br><br>2) ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2019-20ನೇ ಸಾಲಿನ ನಿಯಮ -71 |

ರಡಿಯಲ್ಲಿ ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದಲ್ಲಿ ಬೆಳೆದಿರುವ ಜಂಗಲ್ ಮತ್ತು ಚರಂಡಿ ಹೂಳು ತೆಗೆಯುವ ಕಾಮಗಾರಿಗೆ ಸಂಬಂಧಿಸಿದಂತೆ ಮಾನ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಮೈಸೂರು ರವರು ತಮ್ಮ ಕಛೇರಿ ಪ.ಸಂಖ್ಯೆ:ಕೃಮಾಇ/ಸಕಾನಿಅ(ಮೈ)/ಅ.ಬಿಡ್ ತು.ಶ.ಪ್ತೆ ನಿಯಮ-71 2019-20(ಸಂ,ಸರಗೂರು)/721/2019-20 ದಿ:23/12/2019 ರಲ್ಲಿ ಕಳುಹಿಸಿರುವ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿ ಟೆಂಡರ್‌ನಲ್ಲಿ ಭಾಗವಹಿಸಿದ ಇಬ್ಬರು ಗುತ್ತಿಗೆ ದಾರರ ಪೈಕಿ ಸುರೇಶ್, ಗುತ್ತಿಗೆದಾರರು, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ ತಾ: ರವರು ಸದರಿ ಅಭಿವೃದ್ಧಿ ಕಾಮಗಾರಿಗೆ **2016-17**ನೇ ಶೆಡ್ಯೂಲ್'ಬಿ' ದರಗಳ ನಮೂದಿಸಿರುವ ಶೇ.**4.38** ಹೆಚ್ಚಿನ ದರಗಳ ಮೊತ್ತ ರೂ.**1,00,575.24** ಒಂದನೇ ಕಡಿಮೆ ದರವಾಗಿರು ವುದಾಗಿ ಹಾಗೂ ಇವರ ಟೆಂಡರ್‌ಗೆ ಟೆಂಡರ್ ಪಾರದರ್ಶಕತೆ ನಿಯಮಾನುಸಾರ ಹಾಗೂ ಮಾನ್ಯನಿರ್ದೇಶಕರ ಸುತ್ತೋಲೆಗಳಂತೆ ಸಮಿತಿ ಮಟ್ಟದಲ್ಲಿ ಅನುಮೋದನೆ ಪಡೆದುಕೊಳ್ಳಲು ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿ ಸದರಿ ಕಾಮಗಾರಿಯನ್ನು ಶ್ರೀ ಸುರೇಶ್, ಗುತ್ತಿಗೆದಾರರು, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ ತಾಲ್ಲೂಕು ರವರಿಗೆ ಕೆಲಸದ ಆದೇಶ ನೀಡಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ: 04** 2020-21ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಯಡಿಯಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುವ ಕಾಮಗಾರಿಗಳನ್ನು ಪರಿಶೀಲಿಸುವ ವಿಚಾರ.

**ತೀರ್ಮಾನ:** 2019-20ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಯಡಿಯಲ್ಲಿ ಈ ಕಛೇರಿ ಪತ್ರ ಸಂಖ್ಯೆ:ಕೃಉಮಾಸ '(ಸಂಸ);438:2019-20 ದಿನಾಂಕ:10/10/2019ರಲ್ಲಿ ಮಂಜೂರಾತಿ ಪಡೆಯಲು ಸಲ್ಲಿಸಿದ್ದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಸ್ತುತ 2020-21ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಯಡಿಯಲ್ಲಿ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರುರವರು ತಮ್ಮ ಕಛೇರಿ ಆದೇಶಸಂಖ್ಯೆ:ಕೃಮಾಇ/ಯೋ:ವಾಕ್ರಿಯೋ:248:2017-18 ದಿನಾಂಕ:14-11-2019, ದಿ:08/01/2020, ಹಾಗೂ ದಿ:20/12/2019ರಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ 2020-21ನೇ ಸಾಲಿಗೆ ಪರಿಗಣಿಸಿ ಆಡಳಿತಾತ್ಮಕ ಮಂಜೂರಾತಿ ನೀಡಿರುವುದನ್ನು ಕಾರ್ಯದರ್ಶಿಗಳು ಸಮಿತಿ ಸಭೆಗೆ ವಿವರಿಸಿದರು. ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

| ಕ್ರ ಸಂ. | ಕಾಮಗಾರಿಯ ಹೆಸರು | ಮೊತ್ತ (ಲಕ್ಷಗಳಲ್ಲಿ) |
|---|---|---|
| 01 | ಮುಖ್ಯ ಮಾರುಕಟ್ಟೆ ಪ್ರಾಂಗಣದ ಕಛೇರಿ ಎದುರು ಉದ್ಯಾನವನಕ್ಕೆ ಚೈನ್‌ಲಿಂಕ್ ಫೆನ್ಸಿಂಗ್ ಹಾಗೂ ಉದ್ಯಾನವನದ ಒಳಗೆ ಧ್ವಜಸ್ತಂಭ ನಿರ್ಮಾಣ ಕಾಮಗಾರಿ. | 7.00 |
| 02 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರವೇಶ ದ್ವಾರದಲ್ಲಿ ಕಮಾನು ನಿರ್ಮಾಣ ಕಾಮಗಾರಿ. | 7.00 |
| 03 | ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದ ಖಾಲಿ ಉಳಿದಿರುವ ಚರಂಡಿಗಳಿಗೆ ಡೆಕ್‌ಸ್ಲ್ಯಾಬ್ ನಿರ್ಮಾಣ ಕಾಮಗಾರಿ. | 5.00 |
| **60ಸಿ ಅಡಿಯಸಲ್ಲಿ ಕೃಷಿ ಕಣ ನಿರ್ಮಾಣ ಕಾಮಗಾರಿ** | | |
| 01 | ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿ ಬೊಪ್ಪನಹಳ್ಳಿ, ಮಾಗುಡಿಲು, ಶಿಂಡೇನಹಳ್ಳಿ, ಹಂಚೀಪುರ, ಹಿರೇಹಳ್ಳಿ ಬಿ ಕಾಲೋನಿಗಳಲ್ಲಿ ಕೃಷಿ ಕಣ ನಿರ್ಮಾಣ ಕಾಮಗಾರಿ. | 30.00 |
| | ಒಟ್ಟು = | **49.00** |

| ಕ್ರ ಸಂ. | ವಿದ್ಯುತ್ ಕಾಮಗಾರಿಯ ವಿವರ. | ಮೊತ್ತ (ಲಕ್ಷಗಳಲ್ಲಿ) |
|---|---|---|
| 01 | ಸಂತೆಸರಗೂರು ಮುಖ್ಯ ಮಾರುಕಟ್ಟೆಯ ಆಡಳಿತ ಕಛೇರಿಗೆ ವಿದ್ಯುತ್ ಅಭಿವೃದ್ಧಿಪಡಿಸುವ ಕಾಮಗಾರಿ. | 5.00 |
| 02 | ಸಂತೆಸರಗೂರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 12 ಸಂಖ್ಯೆ ಗೋದಾಮುಗಳು ಮತ್ತು 03ಸಂಖ್ಯೆ ಅಂಗಡಿ—ಗೋದಾಮುಗಳಿಗೆ ವಿದ್ಯುತ್ ಅಭಿವೃದ್ಧಿ ಕಾಮಗಾರಿ. | 15.00 |
| 03 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಬಾರ್ಡ್ 2014-15 (ಹೆಚ್ಚುವರಿ) ಯೋಜನೆಯಡಿ ನಿರ್ಮಿಸುತ್ತಿರುವ 1000 ಮೆ.ಟನ್ ಮತ್ತು 500 ಮೆ.ಟನ್ ಸಾಮರ್ಥ್ಯದ ಗೋದಾಮುಗಳಿಗೆ ಆಂತರಿಕ ವಿದ್ಯುದ್ಧೀಕರಣ ಕಾಮಗಾರಿ. | 2.00 |
| 04 | ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣಕ್ಕೆ ವಿದ್ಯುತ್ ಸರಬರಾಜು ಮತ್ತು ಮಳಿಗೆ ಆಂತರಿಕ ವಿದ್ಯುದ್ಧೀಕರಣ ಕಾಮಗಾರಿ. | 20.00 |
| | ಒಟ್ಟು = | 42.00 |

ಮೇಲ್ಕಂಡ ಕಾಮಗಾರಿಗಳಿಗೆ ಈಗಾಗಲೇ ಮಾನ್ಯ ನಿರ್ದೇಶಕರು 2020-21ನೇ ಸಾಲಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುವುದನ್ನು, ಸಮಿತಿ ಸಭೆಯು ಒಪ್ಪಿ ಸದರಿ ಕಾಮಗಾರಿಗಳಿಗೆ ನಿಯಮಾನುಸಾರ ಟೆಂಡರ್ ಕರೆದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಹುದೆಂದು ಸಮಿತಿ ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ: 05** 2019-20ನೇ ಸಾಲಿನ ನಿಯಮ-71ರ ಅಡಿಯಲ್ಲಿ ಸಮಿತಿಯಲ್ಲಿ ಕಾಮಗಾರಿ ಕೈಗೊಳ್ಳುವ ವಿಚಾರ.

**ತೀರ್ಮಾನ:** 2019-20ನೇ ಸಾಲಿನ ನಿಯಮ 71ರ ಅಡಿಯಲ್ಲಿ ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಹಾಯಕ ಕಾರ್ಯ ಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಮೈಸೂರು ರವರಿಂದ ರೇಖಾ ಅಂದಾಜುಪಟ್ಟಿ ತಯಾರಿಸಿ ಟೆಂಡರ್ ಕರೆಯಲು ಸಮಿತಿ ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

| | |
|---|---|
| 01 | ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದಲ್ಲಿ ಕುಡಿಯುವ ನೀರಿನ ಓವರ್ ಹೆಡ್ ಟ್ಯಾಂಕ್‌ನ ನೆಲ ಮತ್ತು ನೀರಿನ ಗೇಟ್‌ನ ದುರಸ್ತಿ ಕಾಮಗಾರಿ. |
| 02 | ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದ ಉತ್ತರ-ದಕ್ಷಿಣದ ಕಾಂಪೌಂಡ್ ಗೋಡೆಗೆ ಸುಣ್ಣ ಹಾಗೂ ರೈತರ ಉಪಯೋಗಕ್ಕಾಗಿ ನಿರ್ಮಿಸಿರುವ ಮೂತ್ರಾಲಯಕ್ಕೆ ನೀರಿನ ಪೂರೈಕೆ ಕಾಮಗಾರಿ. |
| 03 | ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದ ಪೂರ್ವ-ಪಶ್ಚಿಮ ಕಾಂಪೌಂಡ್ ಗೋಡೆಗೆ ಸುಣ್ಣ-ಬಣ್ಣ ಹೊಡೆಯುವ ಕಾಮಗಾರಿ. |

**ವಿಷಯ:06** ಮಾನ್ಯ ನಿರ್ದೇಶಕರು, ಕೃಮಾ.ಇ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ:ಕೃಮಾಮಂ/4523-4733/2019-20 ದಿನಾಂಕ:03/10/2019 ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕೃಷಿ ಉತ್ಪನ್ನ ಮಾರಾಟ ವಹಿವಾಟಿನ ಮೇಲೆ ಸಂಗ್ರಹಿಸಲಾಗುವ ಮಾರುಕಟ್ಟೆ ಶುಲ್ಕ 10 ಪೈಸೆಯಷ್ಟನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟಮಂಡಳಿಯು ನಿರ್ವಹಿಸಲಾಗುವ "ಮಾರುಕಟ್ಟೆ ಸುಧಾರಣಾ ನಿಧಿಗೆ" ಜಮಾ ಮಾಡಲು ತಿಳಿಸಿರುವುದನ್ನು ಪರಿಶೀಲಿಸುವ ವಿಚಾರ.

**ತೀರ್ಮಾನ:** ಮಾನ್ಯ ನಿರ್ದೇಶಕರು, ಕೃಮಾ.ಇ, ಬೆಂಗಳೂರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಕೃ.ಮಾ.ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ:ಕೃಮಾಮಂ:4523-4733:2019-20 ದಿನಾರ:03.10.2019 ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕೃಷಿ ಉತ್ಪನ್ನ ಮಾರಾಟ ವಹಿವಾಟಿನ ಮೇಲೆ ಸಂಗ್ರಹಿಸಲಾಗುವ ವಹಿವಾಟು ಶುಲ್ಕ 10 ಪೈಸೆಯಷ್ಟನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ನಿರ್ವಹಿಸಲಾಗುವ "ಮಾರುಕಟ್ಟೆ ಸುಧಾರಣೆ ನಿಧಿಗೆ" ಜಮಾ ಮಾಡಲು ತಿಳಿಸಿರುವ ಆದೇಶದ ಬಗ್ಗೆ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಸದರಿ ವಿಷಯವನ್ನು ಮುಂದೂಡಲು ಸಮಿತಿ ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

| | |
|---|---|
| ವಿಷಯ:07 | 2019–20ನೇ ಸಾಲಿನ ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆಗೆ ನಿಗಧಿಪಡಿಸಿದ 2.00ಲಕ್ಷ ರೂ.ಗಳನ್ನು ಪಾವತಿಸುವ ಕುರಿತು. |
| ತೀರ್ಮಾನ: | 2019–20ನೇ ಸಾಲಿನ ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆಗೆ ವಂತಿಕೆಯನ್ನು ಪಾವತಿ ಸುವಂತೆ, ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ರವರ ಆದೇಶ ಸಂಖ್ಯೆ: ಕೃಮಾಇ/ ಮುಂಪ/ ರೈಸಂ/4/2013/2019 ದಿ:17/10/2019ರ ಪತ್ರದಲ್ಲಿ ರೂ.2.00 ಲಕ್ಷಗಳನ್ನು ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ನಿಗಧಿಪಡಿಸಿ ಕೃಷಿ ಮಾರಾಟ ಮಂಡಳಿಗೆ ಪಾವತಿಸುವಂತೆ ಸೂಚಿಸಿರುವುದನ್ನು ಸಮಿತಿ ಸಭೆಯಲ್ಲಿ ಪರಿಶೀಲಿಸಿ ನಿಯಮಾನುಸಾರ ಪಾವತಿಸಲು ಕ್ರಮ ಕೈಗೊಳ್ಳಬಹುದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. |
| ವಿಷಯ:08 | 2020–21ನೇ ಸಾಲಿನ ಸಾಮಾನ್ಯ ಹಾಗೂ ಖಾಯಂನಿಧಿ ಮುಂಗಡ ಪತ್ರವನ್ನು ಪರಿಶೀಲಿಸಿ ಅಂಗೀಕರಿಸುವ ವಿಚಾರ. |
| ತೀರ್ಮಾನ: | 2020–21ನೇ ಸಾಲಿನಲ್ಲಿ ವಿವಿಧ ಮೂಲಗಳಿಂದ ಒಟ್ಟು ರೂ.**3,22,25,000/–**ಗಳ ಆದಾಯವನ್ನು ನಿರೀಕ್ಷಿಸಿರುವುದನ್ನು<br>ಹಾಗೂ ಶಾಸನಬದ್ಧ & ಶಾಸನೇತರ ಬಾಬ್ತುಗಳಿಗೆ ರೂ.**1,92,79,000/–**ಗಳ ಖರ್ಚನ್ನು ಅಂದಾಜು ಮಾಡಿರುವುದನ್ನು ಹಾಗೂ ರೂ.**1,29,46,000/–**ಗಳ ಉಳಿತಾಯದ ಸಾಮಾನ್ಯ ಮುಂಗಡ ಪತ್ರವನ್ನು ಒಪ್ಪಲಾಯಿತು. ಹಾಗೂ 2020–21ನೇ ಸಾಲಿಗೆ ಸಿದ್ಧಪಡಿಸಿರುವ ಖಾಯಂನಿಧಿ ಮುಂಗಡ ಪತ್ರದಲ್ಲಿ ಒಟ್ಟು ರೂ.**6,70,47,245.54**ಗಳ ಆದಾಯ ಪಟ್ಟಿಕೆಯಲ್ಲಿ ಈಗಾಗಲೇ ಕೈಗೊಂಡಿರುವ ಕಾಮಗಾರಿಗಳಿಗೆ ಖರ್ಚು ಹಾಗೂ ಸದರಿ ಕಾಮಗಾರಿಗಳನ್ನು ಪೂರ್ಣ ಗೊಳಿಸಲು ಬೇಕಾಗಿರುವ ಅಂದಾಜು ಮೊತ್ತ ರೂ.**4,14,27,672/–**ಗಳನ್ನು ಕಳೆದು 2020–21ನೇ ಸಾಲಿಗೆ ಉಳಿತಾಯವಾಗುವ ಅಂದಾಜು ಮೊತ್ತ ರೂ.**2,56,19,573.54**ಗಳಲ್ಲಿ ರೂ.**40,12,440/–**ಗಳ ಅಂದಾಜು ಖರ್ಚನ್ನು ಕಳೆದು ರೂ.**2,16,07,133.54**ಗಳ ಉಳಿತಾಯದ ಖಾಯಂನಿಧಿ ಮುಂಗಡ ಪತ್ರವನ್ನು ಪರಿಶೀಲಿಸಿ ಒಪ್ಪಲಾಯಿತು. ಇದಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವಂತೆ ತೀರ್ಮಾನಿಸಲಾಯಿತು. |
| ವಿಷಯ:09 | 2019–20ನೇ ವರ್ಷದಲ್ಲಿ ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿ ನಡೆಯುವ ದನಗಳ ಜಾತ್ರೆಯಲ್ಲಿ ಉತ್ತಮ ರಾಸುಗಳಿಗೆ ಬಹುಮಾನ ವಿತರಿಸುವ ಕುರಿತು. |
| ತೀರ್ಮಾನ: | 2019–20ನೇ ವರ್ಷದಲ್ಲಿ ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿ ನಡೆಯುವ ಈ ಕೆಳಕಂಡ ದನಗಳ ಜಾತ್ರೆಯಲ್ಲಿ ಉತ್ತಮ ರಾಸುಗಳಿಗೆ ಬಹುಮಾನ ವಿತರಿಸುವ ಕುರಿತು ಸಮಿತಿ ಸಭೆಯಲ್ಲಿ ಚರ್ಚಿಸಲಾಗಿ, ಮಾನ್ಯ ಪ್ರಧಾನ ವ್ಯವಸ್ಥಾಪಕರು, ವಿಭಾಗೀಯ ಕಾರ್ಯಾಲಯ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಮೈಸೂರು ಇವರಿಗೆ ನಿಯಮಾನುಸಾರ ಬಹುಮಾನ ವಿತರಣೆಗೆ ಪ್ರಸ್ತಾವನೆಯನ್ನು ಸಲ್ಲಿಸಬಹುದೆಂದು ಸರ್ವಾನು ಮತದಿಂದ ಒಪ್ಪಿ ತೀರ್ಮಾನಿಸಲಾಯಿತು.<br>01. ಶ್ರೀ ಮಹದೇಶ್ವರ ಸ್ವಾಮಿ ಜಾತ್ರಾ ಸಮಿತಿ, ಭೀಮನಕೊಲ್ಲಿ, ಹೆಚ್.ಡಿ.ಕೋಟೆ ತಾಲ್ಲೂಕು<br>02. ಶ್ರೀ ಸಾಗರೆ ಮಹದೇಶ್ವರ ಸ್ವಾಮಿ ದನಗಳ ಜಾತ್ರೆ ಹಾಗೂ ಸಮಿತಿ,ಸಾಗರೆ, ಹೆಚ್.ಡಿ.ಕೋಟೆ ತಾ:<br>03. ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನ ಸಮಿತಿ, ಕಂದೇಗಾಲ, ಹೆಚ್.ಡಿ.ಕೋಟೆ ತಾಲ್ಲೂಕು<br>04. ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನ ಸಮಿತಿ, ನಿಲುವಾಗಿಲು, ಹೆಚ್.ಡಿ.ಕೋಟೆ ತಾಲ್ಲೂಕು<br>05. ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನ ಸಮಿತಿ, ಬೇಲದಕುಪ್ಪೆ, ಹೆಚ್.ಡಿ.ಕೋಟೆ ತಾಲ್ಲೂಕು<br>06. ಶ್ರೀ ಚಂದ್ರ ಮೌಳೇಶ್ವರ ಮಲ್ಲಿಕಾರ್ಜುನ ಸ್ವಾಮಿ ದನಗಳ ಜಾತ್ರೆ, ಮಾದಾಪುರ, ಹೆಚ್.ಡಿ.ಕೋಟೆ ತಾ:<br>07. ಶ್ರೀ ರಾಮಲಿಂಗೇಶ್ವರ ಸ್ವಾಮಿ ಜಾತ್ರಾ ಸಮಿತಿ, ಹೆಚ್.ಮಟಕೆರೆ, ಹೆಚ್.ಡಿ.ಕೋಟೆ ತಾಲ್ಲೂಕು. |
| ವಿಷಯ:10 | ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು. |
| ವಿಷಯ:(1) | ಸಮಿತಿಗೆ ಹೊಸದಾಗಿ ಲೈಸೆನ್ಸ್ ಕೋರಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸುವ ವಿಚಾರ. |

| | |
|---|---|
| ತೀರ್ಮಾನ: | ವಿಷಯವನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಈ ಕೆಳಕಂಡ ಪೇಟೆಕಾರ್ಯಕರ್ತರುಗಳು ಈ ಕೆಳಕಂಡ ವರ್ಷಗಳ ಅವಧಿಗಾಗಿ ಅರ್ಜಿಗಳನ್ನು ಸಲ್ಲಿಸಿರುವುದನ್ನು ಪರಿಶೀಲಿಸಲಾಯಿತು. ಈ ಸಂಬಂಧ ಸುಧೀರ್ಘವಾಗಿ ಚರ್ಚಿಸಿ ಪರವಾನಗಿಗಾಗಿ ಅರ್ಜಿ ಸಲ್ಲಿಸಿರುವ ಪೇಟೆಕಾರ್ಯಕರ್ತರುಗಳಿಗೆ ಹೊಸದಾಗಿ ಪರವಾನಗಿ ಮಂಜೂರು ಮಾಡಲು ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. |

| ಕ್ರ. ಸಂ. | ದಲ್ಲಾಳರ ವಿವರ | ಪರ ವಾನಗಿ | ಲೈಸೆನ್ಸ್ ಅವಧಿ | ಲೈಸೆನ್ಸ್ ಮುಗಿ ಯುವ ಅವಧಿ |
|---|---|---|---|---|
| 01 | ಟಿ.ಎ.ಪಿ.ಸಿ.ಎಂ.ಎಸ್ ರೈಸ್‌ಮಿಲ್<br>ಪ್ರೊ: ಕರೀಂ ಅಲಿ ಬೇಗ್<br>ಹೆಚ್.ಡಿ.ಕೋಟೆ. | ರಫ್ತುದಾರ ಆಮದುದಾರ ದಾಸ್ತಾನುಗಾರ ಸಂಸ್ಕರಣಕಾರ | 10 ವರ್ಷಗಳು | 31.03.2029 |
| 02 | ರಹಮತ್ ರೈಸ್‌ಮಿಲ್<br>ಪ್ರೊ:ರಹಮತ್ ಅಲಿ ಬೇಗ್<br>ಹೆಚ್.ಮಟಕೆರೆ, ಹೆಚ್.ಡಿ.ಕೋಟೆ ತಾಲ್ಲೂಕು. | ರಫ್ತುದಾರ ಆಮದುದಾರ ದಾಸ್ತಾನುಗಾರ ಸಂಸ್ಕರಣಕಾರ | 10 ವರ್ಷಗಳು | 31.03.2029 |
| 03 | ಶ್ರೀ ಭಾನವಿ ಟ್ರೇಡರ್ಸ್<br>ಪ್ರೊ:ಮಹದೇವ್ .ಎಂ<br>ಮಾಗುಡಿಲು ಗ್ರಾಮ, ನೇರಳೆ ಅಂಚೆ<br>ಹೆಚ್.ಡಿ.ಕೋಟೆ ತಾ: | ರಫ್ತುದಾರ ಆಮದುದಾರ ದಾಸ್ತಾನುಗಾರ | 10 ವರ್ಷಗಳು | 31.03.2029 |
| 04 | ಸಣ್ಣಪ್ಪ ತರಕಾರಿ ಮಂಡಿ<br>ಸಣ್ಣಪ್ಪ ಸನ್/ಆಫ್ ಚಿಕ್ಕೇಗೌಡ<br>ಶಿರಮಹಳ್ಳಿ ಗ್ರಾಮ ,ಕಸಬಾ ಹೋಬಳಿ<br>ಹೆಚ್.ಡಿ.ಕೋಟೆ ತಾಲ್ಲೂಕು | ದಲ್ಲಾಳರು | 10 ವರ್ಷಗಳು | 31.03.2029 |

| | |
|---|---|
| ವಿಷಯ:(2) | ಸಮಿತಿಯ ಮುಖ್ಯಮಾರುಕಟ್ಟೆ ಪ್ರಾಂಗಣದಲ್ಲಿ ಸಮಿತಿ ನಿಧಿಯಿಂದ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೈಗೆತ್ತಿಕೊಳ್ಳುವ ವಿಚಾರ. |
| ತೀರ್ಮಾನ: | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಇಲ್ಲದಿರುವುದನ್ನು ಸಮಿತಿಯು ಮನಗಂಡು ರೈತರಿಗೆ ಮೂಲಭೂತ ಸೌಕರ್ಯ ಕಲ್ಪಿಸುವ ಪ್ರಥದ ಆದ್ಯತೆಯ ಹಿತದೃಷ್ಟಿಯಿಂದ ತುರ್ತಾಗಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸಮಿತಿ ನಿಧಿಯಿಂದ ಅಳವಡಿಸಲು ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. ಇದಕ್ಕೆ ಸಂಬಂಧಿಸಿದಂತೆ ರೇಖಾ ಅಂದಾಜನ್ನು ಮಾನ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಮೈಸೂರು ಇವರಿಂದ ರೇಖಾ ಅಂದಾಜನ್ನು ತಯಾರಿಸಿ ಮಾನ್ಯ ನಿರ್ದೇಶಕರಿಂದ ಮಂಜೂರಾತಿ ಪಡೆದು ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. |

ಸಹಿ/-
ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಸಂತೆಸರಗೂರು

ಸಹಿ/-
ಅಧ್ಯಕ್ಷರು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಸಂತೆಸರಗೂರು

"ಯಥಾ ನಕಲು"
ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಸಂತೆಸರಗೂರು.